**OS. No. 62/2016**
**PW – 1**

**ಪ್ರಮಾಣೀಕರಿಸಲಾದ ದಿನಾಂಕ : 06-04-2026**
**ವಾಟೀ ಸವಾಲು : ಪ್ರತಿವಾದಿ ಪರ ಶ್ರೀ. HSB ವಕೀಲರಿಂದ :-**

ನನ್ನನ್ನು ಮನೆಯಲ್ಲಿ ನವೀನ ಎಂದು ಕೂಡಾ ಕರೆಯುತ್ತಾರೆ. ನಾನು ಈ ದಾವೆಯನು ದಾವಾ ಆಸಿತಗಳಲಿ ಅರ್ಧ ಭಾಗ ಬರಬೇಕೆಂದು ದಾಖಲಿಸಿರುತ್ತೇನೆ. ದಾವಾ ಅಸಿಗಳು ನನ್ನ ತಾಯಿಯ ತಾಯಿಯವರಿಗೆ ಸೇರಿದ್ದಾಗಿರುತ್ತದೆ . ನನ್ನ ತಾಯಿಯ ತಾಯಿ ಹೆಸರು ರುದ್ರಮ್ಮ ಅವರು ಈಗ ಮರಣ ಹೊಂದಿರುತ್ತಾರೆ . ಸದರಿ ರುದ್ರಮನವರಿಗೆ ನನ್ನ ತಾಯಿ ಒಬ್ಬಳೇ ಮಗಳಾಗಿರುತ್ತಾರೆ . ನನ್ನ ತಾಯಿ ಕೂಡಾ ಮರಣ ಹೊಂದಿರುತ್ತಾರೆ. ದಾವಾ ಆಸಿತಗಳು ಸದರಿ ರುದ್ರಮ್ಮನವರ ಸ್ವಯಾರ್ಜಿತ ಅಸ್ತಿ ಆಗಿರುತ್ತದೆ . ದಾವಾ ಆಸ್ತಿಗಳು ಅವರ ಸ್ವಯಾರ್ಜಿತ ಅಸಿತಗಂದು ತೋರಿಸಲು ಯಾವುದಾದರೂ ದಾಖಲಾತಿಗಳನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು ನಮಗೆ ಯಾವುದೇ ದಾಖಲಾತಿಗಳು ಸಿಕ್ಕಿರುವುದಿಲ್ಲ ಎಂದು ನುಡಿಯುತ್ತಾರೆ . ನಿಪಿ. 1 ರಿಂದ 3, 5 ಮತ್ತು 6 ಪಹಣಿಗಳು ಪ್ರತಿವಾದಿಯ ಹೆಸರಿನಲ್ಲಿವೆ ಎಂದರೆ ಸರಿ . ದಾವಾ ಐಟಂ ನಂ.4 ನಿಪಿ.4 ರ ಪ್ರಕಾರ ರುದ್ರಮ್ಮ ಕೋಂ ವೀರಣ್ಣ ರವರ ಹೆಸರಿನಲ್ಲಿದೆ ಎಂದರೆ ಸ ರಿ . ವೀರಣ್ಣ ಎಂದರೆ ನನ್ನ ಅಜ್ಜಿ ರುದ್ರಮ್ಮ ನವರ ತಂದೆ . ರುದ್ರಮ್ಮ ನವರ ಗಂಡನ ಹೆಸರು ಚನ್ನಬಸವಯ್ಯ .

ನನ್ನ ತಾಯಿಯ ಮರಣಾ ನಂತರ ದಾವಾ ಆಸಿತ ಗಳು , ಕಂದಾಯ ದಾಖಲಾತಿಗಳು ನನ್ನ ತಮ್ಮನಾದ ಪ್ರತಿವಾದಿಯ ಹೆಸರಿಗೆ ವರ್ಗಾವಣೆಯಾಗಿರುತ್ತದೆ ಎಂದರೆ ಸ ರಿ . ದಾವಾ ಐಟಂ ನಂ.1 ಕೇವಲ 8 ಗುಂಟೆ ವಿಸ್ತೀರ್ಣ ಇದ್ದು ನಾವು 1 ಎಕರೆ 8 ಗುಂಟೆ ಇದೆ ಎಂದು ಸುಳ್ಳಾಗಿ ನಮೂದಿಸಿ ದಾವೆಯನ್ನು ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ನನ್ನ ಅಜ್ಜಿಯಾದ ರುದ್ರಮ್ಮನವರು ಬರೆದಿರುತ್ತಾರೆ ಎಂದು ಹೇಳುವ ನೊಂದಾಯಿತ ಮರಣ ಶಾಸನಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಾನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ದಿನಾಂಕ 06-09-2008 ರ ನೊಂದಾಯಿತ ರದ್ದು ಪತ್ರವನ್ನು ಹಾಜರುಪಡಿಸಿರುತ್ತಾರೆ. ನಾನು ಸದರಿ ದಾಹಲಾತಿಯನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

**ಮುಂದುವರೆದ ವಾಟೀ ಸವಾಲಿಗೆ ಕಾಲಾವಕಾಶ ಕೋರಿರುತ್ತಾರೆ, ನೀಡಲಾಯ್ತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)**

OS. No. /
PW – 1

**ಪ್ರಧಾನ ಸಿವಿಲ್ ನ್ಯಾಯಾಧೀಶರು, ತಿಪಟೂರು.**